# ವಿಶ್ವಾಸನಲ್ಲಿ ಅನುರಾಗ..!

‘ನಾಚಿಕೆ ಆಗಬೇಕು ನಿಮಗೆ ...ನನಗೆ ಬುದ್ದಿ ಹೇಳಲು ಬರ್ತೀರಲ್ಲ! ವಿಕ್ರಮ ಹಳ್ಳಿಮನೆಯವರ ರಾಜಕೀಯ ಪ್ರವೇಶದ ಸಂಭ್ರಮದಲ್ಲಿ ಭಾಗಿಯಾಗಲು ಬಂದಿದ್ದೀರಿ. ಫೈನ್, ಭಾಗವಹಿಸಿ ಆಯಿತು. ಸಿಹಿ ಕಟ್ಟಿಕೊಟ್ಟಿದ್ದಾರೆ ತೊಗೊಂಡು ಹೊರಡಿ ಅಷ್ಟೇ.’

ಸಮಾರಂಭಕ್ಕೆ ಮುಂಚೆ ಅಷ್ಟು ಮಿಣಿಮಿಣಿ ಮಿಂಚುವ ಸ್ಥಳ ಸಮಾರಂಭ ಮುಗಿದ ತಕ್ಷಣ ಕಳಾಹೀನವಾಗುವುದು ಹೇಗೆ? ಯಾಕೆ?

ಬಂದವರೆಲ್ಲಾ ಹೋಗಿಯಾಗಿತ್ತು. ಶಾಮಿಯಾನ, ಕುರ್ಚಿ, ಮೇಜು ತೆಗೆದಿರಲಿಲ್ಲ. ಅಡ್ಡಾದಿಡ್ಡಿ ಎಳೆದಿದ್ದ ಕುರ್ಚಿಗಳು. ಕೆಲವೆಡೆ ತನ್ನಿಂತಾನೆ ಮಡಚಿಕೊಂಡಿದ್ದ ಕೆಂಪು

